# ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
## ಕೇಂದ್ರ ಕಛೇರಿ : ಸಾರಿಗೆ ಸದನ
## ಗುಲಬರ್ಗ

ಸಂಖ್ಯೆ : ಈಕರಸಾ / ಕೇಕ / ನೇಮಕ / ನೇ-27 / 1682/ 2010-11        ದಿನಾಂಕ : 23 / 10 / 2010


**ಜಾಹೀರಾತು ಸಂಖ್ಯೆ : 02/ 2010**

## ದರ್ಜೆ 4ರ ಸಹಾಯಕ – ಬಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಮಾರ್ಗದರ್ಶಿ

ಅಭ್ಯರ್ಥಿಯು ಅರ್ಜಿಯನ್ನು ತುಂಬುವ ಮುನ್ನ ಬ್ಯಾಂಕಿನಲ್ಲಿ ಈ ಅಂತರಜಾಲತಾಣದಲ್ಲಿ ನೀಡಿದ ಎಸ್.ಬಿ.ಎಮ್. ಚಲನ್ ಡೌನ್‌ಲೋಡ್ ಮಾಡಿಕೊಂಡು, ನಿಗದಿತ ಶುಲ್ಕವನ್ನು ಎಸ್.ಬಿ.ಎಮ್. ಬ್ಯಾಂಕ್‌ನಲ್ಲಿ ತುಂಬಿ (ಅರ್ಜಿ ಶುಲ್ಕದ ವಿವರಕ್ಕೆ ನೋಟಿಫಿಕೇಶನ್ ಓದಿ), ನಂತರವಷ್ಟೇ ಅರ್ಜಿ ತುಂಬಲು ಪ್ರಾರಂಭಿಸಿ.

ಅರ್ಜಿ ನಮೂನೆಯನ್ನು ತುಂಬುವ ಬಗೆಯನ್ನು ಇಲ್ಲಿ ವಿವರಿಸಲಾಗಿದೆ. ಇದನ್ನು ನಿಧಾನವಾಗಿ ಓದಿ, ಅರ್ಥ ಮಾಡಿಕೊಂಡು ಅರ್ಜಿಯನ್ನು ತುಂಬಿರಿ. ಇದು ನಿಮ್ಮ ಹೆಸರು ತುಂಬುವುದರಿಂದ (ವೈಯಕ್ತಿಕ ವಿವರಗಳು) ಆರಂಭವಾಗಿ, ನಿಮ್ಮ ಹುದ್ದೆಯ ಆಯ್ಕೆಯ ವಿವರ, ವಿದ್ಯಾರ್ಹತೆ, ಸೇರಿ ಕೊನೆಗೆ ಚಲನ್ ವಿವರಗಳಿಗೆ ಬಂದು, ಅರ್ಜಿ ಸಲ್ಲಿಸು ಎಂಬಲ್ಲಿ ಮುಕ್ತಾಯವಾಗುತ್ತದೆ. ಅರ್ಜಿ ತುಂಬುವುದು ಬಹಳ ಸುಲಭ. ಎಲ್ಲಾ ಸಾಲುಗಳಲ್ಲಿ ಏನನ್ನು ತುಂಬಬೇಕು ಎಂದುದನ್ನು ಇಲ್ಲಿ ವಿವರವಾಗಿ ಹೇಳಲಾಗಿದೆ. ಆದ್ದರಿಂದ ಯಾವುದೇ ಆತುರ, ಉದ್ವೇಗ ಇಲ್ಲದೆ ಸಮಾಧಾನವಾಗಿ ತುಂಬಿರಿ.

ಅರ್ಜಿಯನ್ನು ತುಂಬುವ ಮೊದಲು ಅಧಿಸೂಚನೆಯನ್ನು ಓದಿ ಮನನ ಮಾಡಿಕೊಳ್ಳಿರಿ. ಅರ್ಜಿಯನ್ನು ತುಂಬುವಾಗ ಉಚಿತ ನುಡಿ ತಂತ್ರಾಂಶವನ್ನು ಬಳಸಿ ತುಂಬಬೇಕು. ಇದನ್ನು ಅರ್ಜಿಯಲ್ಲಿ ನುಡಿ ತಂತ್ರಾಂಶ ಬಳಸುವ ಬಗೆ ಎಂಬ ಶೀರ್ಷಿಕೆಯಲ್ಲಿ ವಿವರವಾಗಿ ಹೇಳಲಾಗಿದೆ.





ಚಿತ್ರ – 1

ಚಿತ್ರ – 1 ರಲ್ಲಿ ಕಾಣುವಂತೆ, ನೀವು ಅರ್ಜಿಯನ್ನು ತುಂಬುವ ಮೊದಲು ನೋಟಿಫಿಕೇಶನ್ ಸರಿಯಾಗಿ ಓದಿಕೊಳ್ಳಿ. ನಂತರವಷ್ಟೇ ಅರ್ಜಿ ತುಂಬಿಸಲು ಪ್ರಾರಂಭಿಸಿ. ನೀವು 'ಹೌದು' ಬಟನ್ ಕ್ಲಿಕ್ ಮಾಡಿದರೆ, ಚಾಲಕ ಹುದ್ದೆಯ ಅರ್ಜಿಯು ತೆರೆದುಕೊಳ್ಳುತ್ತದೆ.

ಈಗ ನೀವು ತುಂಬಬೇಕಾದ ಅರ್ಜಿಯ ಮೊದಲ ಪುಟದಲ್ಲಿ ಹೆಸರಿನ ಕಡೆ ನೋಡಿ. ಇದು ಕೆಳಕಂಡಂತೆ ಇರುತ್ತದೆ:


ಸೂಚನೆ : * ಚಿಹ್ನೆಯ ಮಾಹಿತಿಗಳನ್ನು ಕಡ್ಡಾಯವಾಗಿ ತುಂಬಬೇಕು.




ಇಲ್ಲಿ ನಿಮ್ಮ ಹಾಗೂ ನಿಮ್ಮ ತಂದೆಯ ಹೆಸರನ್ನು ನಿಮ್ಮ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿರುವಂತೆ ತುಂಬಿ. (ನಿಮ್ಮ ಇನಿಷಿಯಲ್ ಕೊನೆಗೆ ಅಂದರೆ ಹೆಸರಿನ ನಂತರ ಬರುವಂತೆ ತುಂಬಿರಿ).





ಪುರುಷ ಅಥವಾ ಮಹಿಳೆ ಎಂಬುದನ್ನು ಆಯತದ ಮೇಲೆ ಕ್ಲಿಕ್ ಮಾಡುವುದರ ಮೂಲಕ ಸೂಚಿಸಿ.




ಇಲ್ಲಿ ನೀವು ಸೇರುವ ವರ್ಗವನ್ನು ಸೂಚಿಸಬೇಕು. ಅಂದರೆ, ನೀವು ಸಾಮಾನ್ಯ ವರ್ಗದವರೋ, ಪರಿಶಿಷ್ಟ ಪಂಗಡ/ಜಾತಿ, ಅಥವಾ ವರ್ಗ – 1 ಇತ್ಯಾದಿಗೆ ಸೇರಿದ್ದೀರೋ ಅದನ್ನು ಸೂಚಿಸುವ ವಿಭಾಗ. ಇದಕ್ಕಾಗಿ "ಸಾಮಾನ್ಯ" ಎಂಬ ಪದವಿರುವ ಆಯುತದ ಬಲಕೊನೆಯಲ್ಲಿನ ಚಿಕ್ಕ ಬಾಣದ ಗುರುತನ್ನು ಕ್ಲಿಕ್ ಮಾಡಿ, ಅದರಲ್ಲಿ ಬರುವ ಪಟ್ಟಿಯಿಂದ ಸರಿಯಾದ ವರ್ಗದ ಮೇಲೆ ಕ್ಲಿಕ್ ಮಾಡಿರಿ.

ಆನಂತರ ಜಾತಿ ಎಂದಿರುವಲ್ಲಿ ನಿಮ್ಮ ಜಾತಿಯನ್ನು ನಮೂದಿಸಿರಿ.




ಇದು ಮೀಸಲಾತಿಯನ್ನು ಸೂಚಿಸುವ ವಿಭಾಗ. ಇದನ್ನು ಓದಿಕೊಂಡು ನೀವು ಸೇರುವ ವಿಭಾಗದ ಪಕ್ಕದಲ್ಲಿನ ಚೌಕದಲ್ಲಿ ಕ್ಲಿಕ್ ಮಾಡುವ ಮೂಲಕ ಆಯ್ಕೆ ಮಾಡಿ.


ನೀವು ಮಾಜಿ ಸೈನಿಕ / ಇಲಾಖಾ ಅಭ್ಯರ್ಥಿ ಮೀಸಲಾತಿ ಕೋರುತ್ತಿದ್ದರೆ, ವಯೋಮಿತಿ ರಿಯಾಯಿತಿ ಇರುವುದು. ಹೆಚ್ಚಿನ ಮಾಹಿತಿಗೆ ನೋಟಿಫಿಕೇಶನ್ ನೋಡಿರಿ.

ಸೂಚನೆ : ನೀವು ಇಲಾಖಾ ಅಭ್ಯರ್ಥಿಯ ಮೀಸಲಾತಿ ಕೋರುತ್ತಿದ್ದರೆ, ಸಂಬಂಧಪಟ್ಟ ಇಲಾಖೆ/ವಿಭಾಗದ ಮುಖ್ಯಸ್ಥರಿಂದ ಅನುಮತಿ ಪತ್ರವನ್ನು ಹೊಂದಿರಬೇಕಾಗುತ್ತದೆ.





ಇಲ್ಲಿ ನಿಮ್ಮ ಹುಟ್ಟಿದ ದಿನಾಂಕವನ್ನು ಸೂಚಿಸಬೇಕು. ವರ್ಷ, ತಿಂಗಳು ಮತ್ತು ದಿನಾಂಕ ಕೋಂಬೋ ಬಾಕ್ಸ್‌ನ್ನು ಕ್ಲಿಕ್ಕಿಸಿ ಸರಿಯಾದ ದಿನಾಂಕ, ತಿಂಗಳು ಹಾಗೂ ವರ್ಷವನ್ನು ಸೂಚಿಸಿರಿ. ನೆನಪಿಡಿ ಇದು ನಿಮ್ಮ ಎಸ್.ಎಸ್.ಎಲ್.ಸಿ.

ಅಂಕಪಟ್ಟಿಯಲ್ಲಿದ್ದಂತೆಯೇ ಇರಬೇಕು. ನಂತರ ಪಕ್ಕದಲ್ಲಿರುವ ದಿನಾಂಕವು (Date of Birth, **dd-mm-yyyy** format), ಸರಿಯೇ? ಎಂದು ಪರೀಕ್ಷಿಸಿಕೊಂಡು ಚೆಕ್ ಬಾಕ್ಸ್‌ನ್ನು ಕ್ಲಿಕ್ ಮಾಡುವ ಮೂಲಕ ಖಾತರಿಪಡಿಸಬೇಕು.




ಇಲ್ಲಿ ನಿಮ್ಮ ಅಂಚೆ ವಿಳಾಸವನ್ನು ತುಂಬಬೇಕು. ತಾಲ್ಲೂಕು ಎಂಬಲ್ಲಿ ನಿಮ್ಮ ತಾಲ್ಲೂಕಿನ ಹೆಸರನ್ನು ತುಂಬಿರಿ. ಜಿಲ್ಲೆ ಮತ್ತು ರಾಜ್ಯವನ್ನು ಆಯುತದ ಪಕ್ಕದಲ್ಲಿರುವ ಚಿಕ್ಕ ಬಾಣದ ಗುರುತನ್ನು ಕ್ಲಿಕ್‌ಮಾಡಿ ಬರುವ ಪಟ್ಟಿಯಿಂದ ಆಯ್ದುಕೊಳ್ಳಬೇಕು.

ನಿಮ್ಮ ಊರಿನ ಸರಿಯಾದ ಪಿನ್‌ಕೋಡ್‌ನ್ನು ತುಂಬಿರಿ. ನಂತರ ನಿಮ್ಮ ದೂರವಾಣಿಯ ಎಸ್.ಟಿ.ಡಿ. ಕೋಡ್ ಅನ್ನು ಮಾತ್ರ ತುಂಬಿ. ಸರಿಯಾದ ಮೊಬೈಲ್ / ದೂರವಾಣಿ ಸಂಖ್ಯೆಯನ್ನು ತುಂಬಿರಿ.




ಇಲ್ಲಿ ನೀವು ನಿಮ್ಮ ವಿದ್ಯಾರ್ಹತೆ ವಿವರ ಹಾಗೂ ಅಂಕಗಳ ವಿವರವನ್ನು ನೀಡಿ. ಸಂಖ್ಯೆ 15 ರಲ್ಲಿ – ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಉತ್ತೀರ್ಣರಾದ ನಂತರ ಐ.ಟಿ.ಸಿ. / ಐ.ಟಿ.ಐ. / ಎನ್.ಎ.ಸಿ. / ಕರ್ನಾಟಕ ಸರ್ಕಾರದ ವೃತ್ತಿ ಶಿಕ್ಷಣ ಇಲಾಖೆಯಿಂದ ನಡೆಸಲ್ಪಡುವ ವೃತ್ತಿ ಪರ ಡಿಪ್ಲೋಮಾ ಅಥವಾ ತತ್ಸಮಾನದ ಆಯ್ಕೆಗಳಿದ್ದು, ಒಂದನ್ನು ಆಯ್ಕೆ ಮಾಡಿ. ವಿದ್ಯಾರ್ಹತೆಯನ್ನು ಆಯ್ಕೆ ಮಾಡಿದ ನಂತರ, ಸಂಖ್ಯೆ 16ರಲ್ಲಿ ವೃತ್ತಿಗಳು ಅಂದರೆ ಟಿನ್ ಸ್ಮಿತಿ / ಗ್ಲಾಸ ಕಟಿಂಗ್ / ಮೌಲ್ಡಿಂಗ್ / ಬೆಂಚ್ ಫಿಟಿಂಗ್ / ವೆಲ್ಡಿಂಗ್ / ಬ್ಲಾಕ್ ಸ್ಮಿತಿ / ಪೇಂಟಿಂಗ್ / ಮಶಿನಿಷ್ಠ / ಕಾರ್ಪೆಂಟರಿ / ಟೈರ್ ಫಿಟ್ಟಿಂಗ್ / ಟರ್ನರ್ / ಆಟೋ ಮೆಕ್ಯಾನಿಕ್ / ಶೀಟ್ ಮೆಟಲ್ ವರ್ಕರ್ / ಅಪ್‌ಹೋಲ್‌ಸ್ಟ್ರೀ / ಆಟೋ ಎಲೆಕ್ಟ್ರಿಕಲ್ / ಎಸಿ ಎಲೆಕ್ಟ್ರಿಕಲ್ / ಬಾಡಿ ಫಿಟ್ಟಿಂಗ್ / ವಲ್ಕನೈಜಿಂಗ್ ಈ

ವೃತ್ತಿಗಳಲ್ಲಿ ಒಂದನ್ನು ಅಭ್ಯಸಿಸಿ ಉತ್ತೀರ್ಣರಾಗಿರಬೇಕು. ಇಲ್ಲಿ ನಿಮ್ಮ ವಿದ್ಯಾರ್ಹತೆಗಳಿಗನುಗುಣವಾಗಿ ಮಾಹಿತಿಯನ್ನು ನೀಡಿ.

**ವಿಶೇಷ ಸೂಚನೆ:–**

1) ತಾಂತ್ರಿಕೇತರ (ನಾನ್ ಇಂಜಿನಿಯರಿಂಗ್ / ನಾನ್ ಟೆಕ್ನಿಕಲ್) ವೃತ್ತಿಗಳಾದ ಕ್ಲಾಥಿಂಗ್ ಅಂಡ್ ಎಂಬ್ರಾಯಿಡರಿ / ಕಟಿಂಗ್ ಅಂಡ್ ಟೈಲರಿಂಗ್ / ಕಟ್ಟಿಂಗ್ ಅಂಡ್ ಎಂಬ್ರಾಯಿಡರಿ / ಕಟ್ಟಿಂಗ್ ಅಂಡ್ ಸೊಯಿಂಗ್ / ಪೇಂಟಿಂಗ್ ಅಂಡ್ ಕಾಮರ್ಸ್ / ಎಲೆಕ್ಟ್ರಿಕಲ್ ವೈರಿಂಗ್ ಅಂಡ್ ಸರ್ವಿಸಸ್ ಆಫ್ ಎಲೆಕ್ಟ್ರಿಕಲ್ ಅಪ್ಲಿಯನ್ಸಸ್/ ಎಲೆಕ್ಟ್ರಿಕಲ್ ವೈರಿಂಗ್ ಅಂಡ್ ಮೋಟಾರ್ ರಿವೈಂಡಿಂಗ್ ಮತ್ತು ಇಂತಹ ಇತರೆ ವೃತ್ತಿಗಳನ್ನು ಪರಿಗಣಿಸಲಾಗುವುದಿಲ್ಲ.

2) ಹೆಚ್ಚಿನ ವಿದ್ಯಾರ್ಹತೆಯನ್ನು ಆಯ್ಕೆಗೆ ಪರಿಗಣಿಸುವುದಿಲ್ಲ.

ಸಂಖ್ಯೆ 17 ರಲ್ಲಿ ಎಸ್ ಎಸ್ ಎಲ್ ಸಿ ಯಲ್ಲಿ ಕನ್ನಡದಲ್ಲಿ ವ್ಯಾಸಂಗ ಮಾಡಿದ್ದಲ್ಲಿ ವಿವರ (ಪ್ರಥಮ ಭಾಷೆ, ದ್ವಿತೀಯ ಭಾಷೆ, ತೃತೀಯ ಭಾಷೆ, ವ್ಯಾಸಂಗವಿಲ್ಲ) ಇವುಗಳನ್ನು ಆಯುತದ ಪಕ್ಕದಲ್ಲಿರುವ ಚಿಕ್ಕ ಬಾಣದ ಗುರುತನ್ನು ಕ್ಲಿಕ್‌ಮಾಡಿ ಬರುವ ಪಟ್ಟಿಯಿಂದ ಆಯ್ದುಕೊಳ್ಳಿ.

ಸಂಖ್ಯೆ 18 ರಲ್ಲಿ ನಿಮ್ಮ ಐ.ಟಿ.ಸಿ. / ಐ.ಟಿ.ಐ. / ಎನ್.ಎ.ಸಿ. / ಕರ್ನಾಟಕ ಸರ್ಕಾರದ ವೃತ್ತಿ ಶಿಕ್ಷಣ ಇಲಾಖೆಯಿಂದ ನಡೆಸಲ್ಪಡುವ ವೃತ್ತಿ ಪರ ಡಿಪ್ಲೋಮಾ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಪಡೆದ ಒಟ್ಟು ಅಂಕಗಳನ್ನು ಹಾಗೂ ಪಡೆದ ಅಂಕಗಳನ್ನು ತುಂಬಿ.

ಸೂಚನೆ : ಕನಿಷ್ಠ ಶೇ.35 ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು.

| 19. ಬ್ಯಾಂಕ್ ಚಲನ್/ಜರನಲ್ ವಿವರಗಳು * | | | |
|---|---|---|---|
| ಚಲನ್/ಜರನಲ್ ಸಂಖ್ಯೆ | | ಚಲನ್/ಜರನಲ್ ದಿನಾಂಕ | 25 ▾ ಅಕ್ಟೋಬರ್ ▾ 2010 ▾ |
| ಚಲನ್ ಮೊತ್ತ ರೂ. | 300 | ಬ್ಯಾಂಕಿನ ಹೆಸರು | |
| ಬ್ಯಾಂಕಿನ ಶಾಖೆ/ಸ್ಥಳ | | | |

ಬ್ಯಾಂಕ್‌ನಲ್ಲಿ ಪಾವತಿಸಿದ ಅರ್ಜಿಯ ಶುಲ್ಕದ ವಿವರಗಳನ್ನು ಸಂಖ್ಯೆ.19 (ಬ್ಯಾಂಕ್ ಚಲನ್ / ಜರನಲ್ ವಿವರಗಳು) ರಲ್ಲಿ ನೀಡಬೇಕು.

ಇಲ್ಲಿ ನೀವು ಬ್ಯಾಂಕ್ ಚಲನ್ / ಜರನಲ್ ವಿವರವನ್ನು ಅಂದರೆ ಚಲನ್/ಜರನಲ್ ಸಂಖ್ಯೆ, ಚಲನ್/ಜರನಲ್ ದಿನಾಂಕ, ಬ್ಯಾಂಕಿನ ಹೆಸರು ಹಾಗೂ ಬ್ಯಾಂಕ್ ಶಾಖೆ/ಸ್ಥಳವನ್ನು ತುಂಬಬೇಕು. ಚಲನ್/ಜರನಲ್ ದಿನಾಂಕವನ್ನು ದಿನಾಂಕ, ತಿಂಗಳು ವರ್ಷದ ಆಯುತದ ಪಕ್ಕದಲ್ಲಿನ ಚಿಕ್ಕ ಬಾಣದ ಗುರುತನ್ನು ಕ್ಲಿಕ್‌ಮಾಡಿದಾಗ ಬರುವ ಪಟ್ಟಿಯಿಂದ ಸರಿಯಾದ ದಿನಾಂಕ, ತಿಂಗಳು ಮತ್ತು ವರ್ಷವನ್ನು ಆಯ್ಕೆಮಾಡಿಕೊಳ್ಳಿರಿ. ನೀವು ಬ್ಯಾಂಕ್‌ನಲ್ಲಿ ಪಾವತಿಸಿದ ಶುಲ್ಕವು, ಮೇಲೆ ಕಾಣಿಸಿರುವ ಚಲನ್ ಮೊತ್ತವು ಸರಿಯಾಗಿದೆಯೇ ಎಂದು ಪರೀಕ್ಷಿಸಿಕೊಳ್ಳಿ.

**ಘೋಷಣೆ**

ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ವಿವರಗಳು ನನ್ನ ತಿಳುವಳಿಕೆ ಅನುಸಾರ ಸತ್ಯವಾಗಿದ್ದು, ಪರಿಪೂರ್ಣವಾಗಿವೆ. ಈ ವಿವರಗಳು ಸುಳ್ಳಾಗಿ ಕಂಡು ಬಂದ ಪಕ್ಷದಲ್ಲಿ ನನ್ನನ್ನು ಯಾವಾಗಲಾದರೂ ಸೇವೆಯಿಂದ ಯಾವ ಮುನ್ಸೂಚನೆ ಇಲ್ಲದೆ ತೆಗೆದುಹಾಕಬಹುದಾಗಿದೆ. ಹಾಗೂ ನನ್ನ ನೇಮಕಾತಿಯನ್ನು ರದ್ದು ಪಡಿಸಬಹುದಾಗಿದೆ. ನಾನು ಜನ್ಮತಃ ಭಾರತೀಯ ಹಾಗೂ ಭಾರತೀಯವಾಸಿ ಎಂದೂ ಯಾವುದೇ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಭಾಗಿಯಾಗಿಲ್ಲವೆಂದು ಹಾಗೂ ಕಾನೂನು / ನೀತಿಬಾಹಿರ ಚಟುವಟಿಕೆಗಳಲ್ಲಿ ತೊಡಗಿ ಯಾವುದೇ ನ್ಯಾಯಾಲಯದಿಂದ ಶಿಕ್ಷೆಗೆ ಒಳಪಟ್ಟಿಲ್ಲವೆಂದು / ಯಾವುದೇ ಇಲಾಖೆಗಳ ಸೇವೆಯಿಂದ ವಜಾ ಆಗಿಲ್ಲವೆಂದು ಘೋಷಿಸುತ್ತೇನೆ.

☐ ಮೇಲ್ಕಂಡ ವಿವರಗಳು ಸತ್ಯವೆಂದು ಈ ಮೂಲಕ ದೃಢೀಕರಿಸುತ್ತೇನೆ.

**ಅರ್ಜಿ ಸಲ್ಲಿಸು**

ಈಗ ನೀವು ಅರ್ಜಿ ತುಂಬುವ ಕೊನೆಯ ಹಾಗೂ ಅತಿ ಮುಖ್ಯಭಾಗಕ್ಕೆ ಬಂದಿದ್ದೀರಿ. ಇಲ್ಲಿ ನೀವು ಅರ್ಜಿಯಲ್ಲಿ ತುಂಬಿರುವ ಎಲ್ಲ ಅಂಶಗಳು ಸತ್ಯ ಹಾಗೂ ಪರಿಪೂರ್ಣ ಎಂಬುದನ್ನು ಸೂಚಿಸುವ ಸ್ಥಳ. ಇದರಲ್ಲಿ "ಮೇಲ್ಕಂಡ ವಿವರಗಳು ಸತ್ಯವೆಂದು ಈ ಮೂಲಕ ದೃಢೀಕರಿಸುತ್ತೇನೆ" ಎಂದಿರುವುದರ ಪಕ್ಕದಲ್ಲಿನ ಚೌಕವನ್ನು ಕ್ಲಿಕ್‌ಮಾಡಿರಿ. ಇದನ್ನು ಕ್ಲಿಕ್ ಮಾಡದೆ ಅರ್ಜಿ ಸಲ್ಲಿಸಲು ಸಾಧ್ಯವಿಲ್ಲ.

ನಂತರ ಅರ್ಜಿ ಸಲ್ಲಿಸಿ ಎಂಬುದನ್ನು ಕ್ಲಿಕ್ ಮಾಡಿರಿ. ಒಮ್ಮೆ ಇದನ್ನು ಕ್ಲಿಕ್ ಮಾಡಿದ ಮೇಲೆ ಅರ್ಜಿಯನ್ನು ಬದಲಾಯಿಸಲು ಸಾಧ್ಯವಿಲ್ಲ. ಹಾಗಾಗಿ, ದಯಮಾಡಿ ಎಲ್ಲ ವಿವರಗಳನ್ನು ಪರಿಶೀಲಿಸಿ, ಖಾತ್ರಿಪಡಿಸಿಕೊಂಡ ನಂತರ ಇದನ್ನು ಕ್ಲಿಕ್ ಮಾಡಿರಿ. ಇದನ್ನು ಕ್ಲಿಕ್ ಮಾಡಿದರೆ **ಮಾತ್ರ ಅರ್ಜಿ ತುಂಬುವ ಕೆಲಸ ಪೂರ್ತಿಯಾದಂತೆ. ಮರೆಯದಿರಿ. ಹಾಗೆಯೇ, ನಿಮ್ಮ ಅರ್ಜಿಯನ್ನು ಮುದ್ರಿಸಿಕೊಳ್ಳಿರಿ. ಈ ಮುದ್ರಿತ ಅರ್ಜಿಯನ್ನು ನೀವು ಸಂದರ್ಶನಕ್ಕೆ ಅರ್ಹರಾಗಿದ್ದಲ್ಲಿ ಸಂದರ್ಶನಕ್ಕೆ ಬರುವಾಗ ತಪ್ಪದೇ ತೆಗೆದುಕೊಂಡು ಬರಬೇಕು.**

ಅರ್ಜಿಯನ್ನು ಸಲ್ಲಿಸಿದ ನಂತರ ನಿಮ್ಮ ಅರ್ಜಿಯು ಯಶಸ್ವಿಯಾಗಿ ದಾಖಲಾಗಿ ನೋಂದಣಿ ಸಂಖ್ಯೆಯನ್ನು ನೀಡುತ್ತದೆ. ಇದನ್ನು ತಪ್ಪದೇ ಗುರುತು ಹಾಕಿಕೊಳ್ಳಿ. **'ಅರ್ಜಿ ಮುದ್ರಿಸು' ಬಟನ್ ಕ್ಲಿಕ್ ಮಾಡುವ ಮೂಲಕ ಅರ್ಜಿಯ ಪ್ರತಿಯನ್ನು ಸಹ ಪಡೆದು ಸರಿಯಾಗಿದೆಯೇ ಎಂದು ಪರೀಕ್ಷಿಸಿಕೊಳ್ಳಿ.**

## ನಿಮಗೆ ಶುಭ ಹಾರೈಕೆಗಳು